






ದಿನಾಂಕ:21-07-2023 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾದವರು ಏರ್ಪಡಿಸಿದ 24ನೇ ಕಾರ್ಗಿಲ್ ವಿಜಯ ದಿವಸ "ಶ್ರದ್ಧಾಂಜಲಿ ಕಳಶ" ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ .ಹೊರಟ್ಟಿ ಅವರು ಹುತಾತ್ಮ ಯೋಧರಿಗೆ ಪುಷ್ಪನಮನ ಸಲ್ಲಿಸಿ ದೇಶಕ್ಕಾಗಿ ಪ್ರಾಣತೆತ್ತ ವೀರಯೋಧರಿಗೆ ಎಷ್ಟು ನಮನ ಗೌರವ ಸಲ್ಲಿಸಿದರೂ ಕಡಿಮೆಯೇ ಅವರ ಜೀವಕ್ಕೆ ಬೆಲೆಕಟ್ಟಲು ಅಸಾಧ್ಯ. ಜಗತ್ತಿಗೆ ಭಾರತದ ಪರಾಕ್ರಮವನ್ನು ತೋರಿದ ವೀರಯೋಧರನ್ನು ಮತ್ತೆ ಮತ್ತೆ ಸ್ಮರಿಸಿ ಗೌರವಿಸೋಣ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾ ಪರಿವಾರದ ಸದಸ್ಯರು, ವೀರ ಯೋಧರು, ಭಾರತೀಯ ಸೇನೆಯ ಪ್ರಮುಖ ಆಡಳಿತ ವರ್ಗ ಹಾಗೂ ಸಭಾಪತಿಯವರ ವಿಶೇಷಾಧಿಕಾರಿ ಶ್ರೀಮತಿ ಶೈಲಾ ಕೆ.ಡಿ ಭಾಗವಹಿಸಿದ್ದರು.